**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ.**

**ಸಿಸಿ ನಂ. 117/2018**

**ಚಾಸಾ-29/ಫ್ರಾಸಾ-28**

| | |
|---|---|
| **ಹೆಸರು** | ಸಂಗಮೇಶ |
| **ತಂದೆ ಹೆಸರು** | ವಿರಣ್ಣ ಶಿವಯೋಗಿ |
| **ವಯಸ್ಸು** | 38 ವರ್ಷಗಳು |
| **ಉದ್ಯೋಗ** | ಆರಕ್ಷಕ ನಿರೀಕ್ಷಕರು, ಮಾರ್ಕೆಟ ಠಾಣೆ , ಬೆಳಗಾವಿ |
| **ವಾಸ ಸ್ಥಳ** | ಬೆಳಗಾವಿ. |

**ಸಾಕ್ಷಿಯನ್ನ ದಿನಾಂಕ 01-02-2020 ರಂದು ಸಾಕ್ಷಿಯನ್ನ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ.**

ನಾನು 29–10–2009 ರಿಂದ 11–12–2011 ರವರೆಗೆ ಜೇವರ್ಗಿ ಪೊಲೀಸ ಠಾಣೆಯಲ್ಲಿ ಆರಕ್ಷಕ ಉಪ–ನೀರಿಕ್ಷಕನಾಗಿ ಕೆಲಸ ಮಾಡಿರುತ್ತೇನೆ.

ಪ್ರಕರಣದ ಕಡತವನ್ನ ದಿನಾಂಕ 03-11-2009 ರಂದು ಚಾಸಾ-28 ರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆ ಕೈಗೊಂಡಿರುತ್ತೆನೆ.

ದಿನಾಂಕ 03-11-2009 ರಂದು ಚಾಸಾ-1 ಮತ್ತು ಆರೋಪಿಗಳಿಗೆ ಸಂಬಂಧಿಸಿದ ಸರ್ವೆ ನಂಬರ್ 299 ರ 2 ಪಹಣಿ ಪತ್ರಿಕೆಗಳನ್ನ ಕಂದಾಯ ಇಲಾಖೆಯಿಂದ ಪಡೆದು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ಸದರಿ ಪಹಣಿ ಪತ್ರಿಕೆಗಳನ್ನ ನಿಪಿ-43 ರಿಂದ 46 ಎಂದು ಈಗಾಗಲೇ ಗುರುತಿಸಲಾಗಿದೆ.

ದಿನಾಂಕ 17-07-2010 ರಂದು ಸ್ವಾಧೀನವಾದ ಭೂಮಿಗೆ ಸಂಬಂಧಿಸಿದಂತೆ ಪರಿಹಾರ ಪಡೆದ ಬಗ್ಗೆ ಭೂಸ್ವಾಧೀನಾಧಿಕಾರಿಗಳಿಂದ ಧೃಡಿಕರಣ ಮತ್ತು ಭೂ ಪರಿಹಾರ ಪತ್ರ ವನ್ನ ಪಡೆದಿರುತ್ತೇನೆ ಧೃಡಿಕರಣ ಪತ್ರ ವನ್ನ ನಿಪಿ-65 ಮತ್ತು ಒಪ್ಪಿಗೆ ಐತೀರ್ಪನ್ನ ನಿಪಿ-66 ಮತ್ತು ಅವುಗಳ ಮೇಲಿನ ಸಾಕ್ಷಿ ಸಹಿಗಳನ್ನ ನಿಪಿ-65(ಎ) ಮತ್ತು 66(ಎ) ಎಂದು ಗುರುತಿಸಲಾಯಿತು.

ದಿನಾಂಕ 19-07-2010 ರಂದು ಜೇವರ್ಗಿಯ ತಹಸಿಲ್ದಾರ ಕಛೇರಿಯ ದ್ವಿತಿಯ ದರ್ಜೆ ಸಹಾಯಕನಾದ ಯಲ್ಲಪ್ಪ ತಂದೆ ಹಣಮಂತ ಪವಾರ ಎನ್ನುವವರು 1) 1 ನೇ ಆರೋಪಿಯು ಯೋಜನಾ ನಿರಾರ್ಷಿತರ ಪ್ರಮಾಣ ಪತ್ರ ಪಡೆಯಲು ಸಲ್ಲಿಸಿದ್ದ ಅರ್ಜಿ, 2) 2 ನೇ ಆರೋಪಿ ಗುರುಸ್ವಾಮಿಯವರು ಸಲ್ಲಿಸಿದ ಕೈ ಬರಹದ ಮೂಲ ವರದಿ, 3) 2 ನೇ ಆರೋಪಿ ಗುರುಸ್ವಾಮಿ ಮಾಡಿದ ಕೈ ಬರಹದ ಮೂಲ ಪಂಚನಾಮೆ, 4) 2 ನೇ ಆರೋಪಿ ತಯಾರಿಸಿದ ಕೈ ಬರಹದ ವಂಶವೃಕ್ಷ, 5) 1 ನೇ ಆರೋಪಿ ಸಲ್ಲಿಸಿದ್ದ ಛಾಪಾ ಕಾಗದ, 6) ಚಾಸಾ-12 ಸಲ್ಲಿಸಿದ್ದ ವರದಿ ಮತ್ತು 7) 1 ನೇ ಆರೋಪಿ ಪಡೆದಿದ್ದ ಯೋಜನಾ ನಿರಾಶ್ರಿತರ ಪ್ರಮಾಣ ಪತ್ರ ಗಳನ್ನ ಹಾಜರು

ಮಾಡಿರುತ್ತಾನೆ. ಅವುಗಳನ್ನ ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ನಿಪಿ-2 ಜಪ್ತು ಪಂಚನಾಮೆಯಡಿ ಜಪ್ತು ಮಾಡಿಕೊಂಡಿರುತ್ತೇನೆ. ನಿಪಿ-2 ರ ಮೇಲಿನ ಸಾಕ್ಷಿ ಸಹಿಯನ್ನ ನಿಪಿ-2(ಸಿ) ಎಂದು ಗುರುತಿಸಲಾಯಿತು.

ನಿಪಿ-2 ಪಂಚನಾಮೆಯಡಿ ಜಪ್ತು ಮಾಡಿದ ದಾಖಲೆಗಳನ್ನ ನೀಡಿದ ವರದಿಯನ್ನ ನಿಪಿ-24 ಎಂದು ಈಗಾಗಲೇ ಗುರುತಿಸಲಾಗಿದೆ. 1 ನೇ ಆರೋಪಿ ಸಲ್ಲಿಸಿದ್ದ ಅರ್ಜಿಯನ್ನ ಈಗಾಗಲೇ ನಿಪಿ-32 ಎಂದು ಗುರುತಿಸಲಾಗಿದ್ದು ಅದರ ಮೇಲಿನ ಸಾಕ್ಷಿ ಸಹಿಯನ್ನ ನಿಪಿ-32(ಎ) ಎಂದು ಗುರುತಿಸಲಾಯಿತು. 2 ನೇ ಆರೋಪಿ ಸಲ್ಲಿಸಿದ ವರದಿಯನ್ನ ಈಗಾಗಲೇ ನಿಪಿ-33 ಎಂದು ಗುರುತಿಸಲಾಗಿದ್ದು ಅದರ ಮೇಲಿನ ಸಾಕ್ಷಿ ಸಹಿಯನ್ನ ನಿಪಿ-33(ಎ) ಎಂದು ಗುರುತಿಸಲಾಯಿತು. 2 ನೇ ಆರೋಪಿ ಮಾಡಿದ್ದ ಪಂಚನಾಮೆಯನ್ನ ಈಗಾಗಲೇ ನಿಪಿ-34 ಎಂದು ಗುರುತಿಸಲಾಗಿದ್ದು ಅದರ ಮೇಲಿನ ಸಾಕ್ಷಿ ಸಹಿಯನ್ನ ನಿಪಿ-34(ಎ) ಎಂದು ಗುರುತಿಸಲಾಯಿತು. 2 ನೇ ಆರೋಪಿ ತಯಾರಿಸಿದ್ದ ವಂಶವೃಕ್ಷವನ್ನ ಈಗಾಗಲೇ ನಿಪಿ-35 ಎಂದು ಗುರುತಿಸಲಾಗಿದ್ದು ಅದರ ಮೇಲಿನ ಸಾಕ್ಷಿ ಸಹಿಯನ್ನ ನಿಪಿ-35(ಎ) ಎಂದು ಗುರುತಿಸಲಾಯಿತು. 1 ನೇ ಆರೋಪಿ ನೀಡಿದ್ದ ಪ್ರಮಾಣ ಪತ್ರವನ್ನ ಈಗಾಗಲೇ ನಿಪಿ-36 ಎಂದು ಗುರುತಿಸಲಾಗಿದ್ದು ಅದರ ಮೇಲಿನ ಸಾಕ್ಷಿ ಸಹಿಯನ್ನ ನಿಪಿ-36(ಎ) ಎಂದು ಗುರುತಿಸಲಾಯಿತು. 1 ನೇ ಆರೋಪಿ ತಹಸಿಲ್ದಾರರಿಂದ ಪಡೆದಿದ್ದ ನಿರಾಶ್ರಿತರ ಪ್ರಮಾಣ ಪತ್ರವನ್ನ ಈಗಾಗಲೇ ನಿಪಿ37 ಎಂದು ಗುರುತಿಸಲಾಗಿದ್ದು ಅದರ ಮೇಲಿನ ಸಾಕ್ಷಿ ಸಹಿಯನ್ನ ನಿಪಿ-37(ಎ) ಎಂದು ಗುರುತಿಸಲಾಯಿತು. ಚಾಸಾ-22 ರವರು 18-08-2009 ರಂದು ವಿಚಾರಣಾ ಕಾಲದಲ್ಲಿ ಚಾಸಾ-9 ಮತ್ತು 10 ರವರಿಂದ ಪಡೆದಿದ್ದ ಹೇಳಿಕೆ ಪತ್ರವನ್ನ ಈಗಾಗಲೇ ನಿಪಿ18 ಎಂದು ಗುರುತಿಸಲಾಗಿದ್ದು ಅದರ ಮೇಲಿನ ಸಾಕ್ಷಿ ಸಹಿಯನ್ನ ನಿಪಿ-18(ಬಿ) ಎಂದು ಗುರುತಿಸಲಾಯಿತು

ಅದೇ ದಿನ 1 ನೇ ಆರೋಪಿ ತಯಾರಿಸಿದ್ದ ಒಪ್ಪಿಗೆ ಪ್ರಮಾಣ ಪತ್ರ ಮತ್ತು ಚಾಸಾ22 ರವರು ಚಾಸಾ-6 ರಿಂದ 8 ರವರಿಂದ ಪಡೆದಿದ್ದ ಹೇಳಿಕೆ ಪತ್ರಗಳನ್ನ ಯಲ್ಲಪ್ಪ ಹಣುಮಂತಪ್ಪ ಪವಾರ ಹಾಜರು ಮಾಡಿದ್ದು ಅವುಗಳನ್ನ ಚಾಸಾ-2 ಮತ್ತು 3 ರವರ ಸಮಕ್ಷಮ ನಿಪಿ-3 ಜಪ್ತು ಪಂಚನಾಮೆಯಡಿ ಜಪ್ತು ಮಾಡಿಕೊಂಡಿರುತ್ತೇನೆ. ನಿಪಿ-3 ರ ಮೇಲಿನ ಸಾಕ್ಷಿ ಸಹಿಯನ್ನ ನಿಪಿ-3(ಸಿ) ಎಂದು ಗುರುತಿಸಲಾಯಿತು.

ದಿನಾಂಕ 05-09-2010 ರಂದು ಚಾಸಾ-6 ನ್ನ ಠಾಣೆಗೆ ಕರೆಸಿ ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ಚಾಸಾ-6 ರವರ ಬೆರಳು ಮುದ್ರೆಗಳನ್ನ ನಿಪಿ-4 ಜಪ್ತು ಪಂಚನಾಮೆಯಡಿ ಸಂಗ್ರಹಿಸಿರುತ್ತೇನೆ ನಿಪಿ-4 ರ ಮೇಲಿನ ಸಾಕ್ಷಿ ಸಹಿಯನ್ನ ನಿಪಿ-4(ಸಿ) ಎಂದು ಗುರುತಿಸಲಾಯಿತು.

ದಿನಾಂಕ 26-07-2010 ರಂದು 1 ನೇ ಆರೋಪಿಯನ್ನ ಠಾಣೆಗೆ ವಿಚಾರಣೆಗೆ ಕರೆಸಿ ಆತನ ಮಾದರಿ ರುಜುಗಳನ್ನ ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ನಿಪಿ-5 ಜಪ್ತು ಪಂಚನಾಮೆಯಡಿ ಪಡೆದುಕೊಂಡಿರುತ್ತೇನೆ. ನಿಪಿ-5 ರ ಮೇಲಿನ ಸಾಕ್ಷಿ ಸಹಿಯನ್ನ ನಿಪಿ-5(ಸಿ) ಎಂದು ಗುರುತಿಸಲಾಯಿತು.

ದಿನಾಂಕ 30-07-2010 ರಂದು 2 ನೇ ಆರೋಪಿತನನ್ನ ವಶಕ್ಕೆ ಪಡೆದು ಆತನ ಸ್ವಖುಷಿ ಹೇಳಿಕೆಯನ್ನ ಪಡೆದುಕೊಂಡು ಅದೇ ದಿನ ಚಾಸಾ-4 ಮತ್ತು 5 ರವರನ್ನ ಠಾಣೆಗೆ ಕರೆಸಿ ಮಧ್ಯಾಹ್ನ 03-30 ರಿಂದ 05-30 ರ ಸಮಯದಲ್ಲಿ ಸದರಿ ಆರೋಪಿಯ ಮಾದರಿ ಬರವಣಿ ಮತ್ತು ರುಜುಗಳನ್ನ ಸಮಕ್ಷಮ ನಿಪಿ-6 ಜಪ್ತು

ಪಂಚನಾಮೆಯಡಿ ಪಡೆದುಕೊಂಡಿರುತ್ತೇನೆ. ನಿಪಿ-6ರ ಮೇಲಿನ ಸಾಕ್ಷಿ ಸಹಿಯನ್ನ ನಿಪಿ-6(ಸಿ) ಎಂದು ಗುರುತಿಸಲಾಯಿತು. ನಂತರ ಆತನನ್ನ ನಮ್ಮ ಸಿಬ್ಬಂದಿಗಳ ಮುಖಾಂತರ ನ್ಯಾಯಾಧೀಶರ ಮುಂದೆ ಹಾಜರು ಮಾಡಲು ಕಳುಹಿಸಿರುತ್ತೇನೆ.

ದಿನಾಂಕ 30-11-2010 ರಂದು 1 ನೇ ಆರೋಪಿಯನ್ನ ಠಾಣೆಗೆ ಕರೆಸಿ ಆತನ ಬೆರಳು ಮುದ್ರೆಯನ್ನ ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ಬೆಳಿಗ್ಗೆ 10-00 ರಿಂದ 11-00 ರ ಅವಧಿಯಲ್ಲಿ ನಿಪಿ-7 ಜಪ್ತು ಪಂಚನಾಮೆಯಡಿ ಪಡೆದುಕೊಂಡಿರುತ್ತೇನೆ. ನಿಪಿ-7 ರ ಮೇಲಿನ ಸಾಕ್ಷಿ ಸಹಿಯನ್ನ ನಿಪಿ-7(ಸಿ) ಎಂದು ಗುರುತಿಸಲಾಯಿತು.

ಚಾಸಾ-22 ರವರು ತಹಸಿಲ್ದಾರರಿಗೆ ಸಲ್ಲಿಸಿದ ವರದಿಯನ್ನ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಸದರಿ ವರದಿಯನ್ನ ಗುರುತಿಸಿರುತ್ತಾರೆ. ಅದನ್ನ ನಿಪಿ-67 ಎಂದು ಗುರುತಿಸಲಾಯಿತು.

ಆರೋಪಿಗಳನ್ನ ನೋಡಿದರೆ ಗುರುತಿಸುತ್ತೇನೆ. ಆರೋಪಿಗಳು ಗೈರು ಹಾಜರು. ಆರೋಪಿಗಳ ಗುರುತಿಸುವಿಕೆಯನ್ನ ತಕರಾರು ಮಾಡುವುದಿಲ್ಲ ಎಂದು ಆರೋಪಿಗಳ ಪರ ವಕೀಲರು ತಿಳಿಸಿರುತ್ತಾರೆ.

ನನ್ನ ವರ್ಗಾವಣೆ ನಿಮಿತ್ತ ಪ್ರಕರಣದ ಕಡತವನ್ನ ಮುಂದಿನ ತನಿಖೆಗಾಗಿ ಚಾಸಾ-30 ರವರಿಗೆ ಹಸ್ತಾಂತರಿಸಿರುತ್ತೆನೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಾದ ಶ್ರೀ ಆರ್. ಕೆ. ಹಿರೇಮಠರವರಿಂದ.**

ದಿನಾಂಕ 19–07–2010 ಅಥವಾ ಅದಕ್ಕಿಂತ ಮೊದಲು ದಾಖಲೆಗಳನ್ನ ಕೋರಿ ಜೇವರ್ಗಿಯ ತಹಸಿಲ್ದಾರರಿಗೆ ನಾನು ಯಾವುದೇ ಮನವಿ ಪತ್ರವನ್ನ ಸಲ್ಲಿಸಿದ್ದೇನೋ ಅಥವಾ ಇಲ್ಲವೋ ನೆನಪಿಲ್ಲ ಕಂದಾಯ ಇಲಾಖೆಯ ದಾಖಲೆಗಳನ್ನ ನನಗೆ ನೀಡಲು ಸದರಿ ಕಛೇರಿಯ ಗುಮಾಸ್ತನಾದ ಯಲ್ಲಪ್ಪ ತಂದೆ ಹಣಮಂತ ಪವಾರನಿಗೆ ತಹಸಿಲ್ದಾರರು ಯಾವುದೇ ಅಥೋರೈಜೆಶನ ಪತ್ರವನ್ನ ನೀಡಿರುವುದಿಲ್ಲ ಸಾಕ್ಷಿ ಮುಂದುವರೆದು ಮೌಖಿಕವಾಗಿ ಆದೇಶಿಸಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಯಲ್ಲಪ್ಪ ತಂದೆ ಹಣಮಂತ ಪವಾರನ ಸಾಕ್ಷಿ ಹೇಳಿಕೆಯನ್ನ ಪಡೆದಿರುವುದಿಲ್ಲ.

ನಿಪಿ–2 ಮತ್ತು 3 ರಡಿ ಜಪ್ತು ಮಾಡಿಕೊಂಡಿರುವ ಮತ್ತು ನಿಪಿ–24 ವರದಿಯಲ್ಲಿ ನಮೂದಿಸಿರುವ ದಾಖಲೆಗಳು ಈ ಪ್ರಕರಣದಲ್ಲಿ ಪ್ರಥಮ ವರ್ತಮಾನ ವರದಿಯನ್ನ ದಾಖಲಿಸುವ ಪೂರ್ವದಲ್ಲಿ ಅಸ್ತಿತ್ವದಲ್ಲಿ ಇದ್ದವು ಎಂದರೆ ಸರಿ. ನಿಪಿ–24 ವರದಿಯಲ್ಲಿ ನಮೂದಿಸಿರುವ ದಾಖಲೆಗಳಿಗೆ ಸಂಬಂಧಿಸಿದಂತೆ ಹಾಗೂ ಸದರಿ ದಾಖಲೆಗಳಲ್ಲಿ ನಮೂದು ಇರುವ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ನಾನು ಸ್ವತಂತ್ರವಾಗಿ ಯವುದೇ ತನಿಖೆ ಮಾಡಿರುವುದಿಲ್ಲ ಎಂದರೆ ಸರಿ.

ಆರೋಪಿಗಳ ಬೆರಳು ಮುದ್ರೆಗಳು ಮತ್ತು ಬರವಣಿಗೆಗಳ ಮಾದರಿಯನ್ನ ಪಡೆದುಕೊಳ್ಳುವ ಪೂರ್ವದಲ್ಲಿ ನ್ಯಾಯಾಲಯದಿಂದ ಯಾವುದೇ ಅನುಮತಿಯನ್ನ ಪಡೆದಿರುವುದಿಲ್ಲ. ನಿಪಿ–57 ರಿಂದ 59 ರ ಪ್ರಕಾರ ಪಡೆದಿರುವ ಬೆರಳು ಮುದ್ರೆ ಪುಟದಲ್ಲಿ ಅದನ್ನ ತೆಗೆದುಕೊಂಡವರ ಹೆಸರು, ಹುದ್ದೆ ಮತ್ತು ಪಡೆದ ದಿನಾಂಕವನ್ನ ನಮೂದಿಸಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ದಾಖಲೆಗಳಲ್ಲಿ ಪಂಚರ ಸಹಿ ಮತ್ತು ಸದರಿ ಬೆರಳು ಮುದ್ರೆಗಳನ್ನ ಪಡೆದ ದಿನಾಂಕವನ್ನ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಪಿ–24 ರಲ್ಲಿ ನಮೂದಿಸಿರುವ ಮತ್ತು ನಿಪಿ–2 ಮತ್ತು 3 ರಡಿಯಲ್ಲಿ ಜಪ್ತು ಮಾಡಿಕೊಳ್ಳಲಾಗಿದೆ ಎನ್ನುವ ದಾಖಲೆಗಳನ್ನ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ಆರೋಪಿಗಳ ಬೆರಳು ಮುದ್ರೆಗಳು ಮತ್ತು ಕೈ ಬರಹದ ಬರವಣಿಗೆಯನ್ನ ಕಾನೂನು ಪ್ರಕಾರ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**
**ಓ.ಹೇ.ಕೆ.ಸರಿ.ಇದೆ.**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು,**
**ಜೇವರ್ಗಿ**